'ಈ ತುಟಿಗಳನ್ನು ಕೇಳಿದರೆ...'

'ಕೊಡುತ್ತೇನೆ ನರಸಣ್ಣ...'

ನರಸಯ್ಯ ಅವಳ ಕಣ್ಣುಗಳನ್ನು ನೋಡುತ್ತಿದ್ದಾನೆ. ಅಬ್ಬ... ಎಷ್ಟೊಂದು ಚೆನ್ನಾಗಿದೆ. ಅಗಲವಾದ ಬಟ್ಟಲು ಕಣ್ಣುಗಳು, ಕಡುಕಪ್ಪು ಬಣ್ಣದಲ್ಲಿ ಏನೋ ಒಂದು ರೀತಿಯ ಹೊಳಪು, ಆ ಹೊಳಪಿನಲ್ಲಿ ಮಾದಕತೆ. ಮರೆಯುತ್ತಿದ್ದಾನೆ... ಸುಂದರ ಕಣ್ಣುಗಳ ಹೊಳಪಿನಲ್ಲಿ ಎಲ್ಲವನ್ನೂ ಮರೆಯುತ್ತಿದ್ದಾನೆ. ಸಮಯ ಉರುಳುತ್ತಿದೆ. ಅಲ್ಲಾಡದೆ ಅಲ್ಲೇ ನೋಡುತ್ತಿದ್ದಾನೆ. ಮಲ್ಲಿಗೆ ಈಗ ಬ್ಲೇಡನ್ನು ತೆಗೆದು ಅವನ ತಲೆಯ ಕೂದಲನ್ನು ಕತ್ತರಿಸಿದಳು.

ಮಲ್ಲಿಗೆ ನಡೆಯುತ್ತಿದ್ದಾಳೆ. ಅವನು ನೋಡುತ್ತಲೇ ಇದ್ದಾನೆ. ಅರ್ಧ ಗಂಟೆಯಾದರೂ ಅದೇ ರೀತಿ ಕುಳಿತಿದ್ದ. ಯಾರೋ ಕೆಲಸದ ಆಳು ಬಂದು ಅಲುಗಾಡಿಸಿದ ನಂತರ ಅವನಿಗೆ ಎಚ್ಚರಿಕೆ ಉಂಟಾಯಿತು. ಗಾಬರಿಯಿಂದ ನೋಡಿದ. ಮಲ್ಲಿಗೆಗಾಗಿ ಹುಡುಕಾಡಿದ. ಏನೋ ಅನುಮಾನ ಬರುತ್ತಿದೆ.

* * *

ಧಗಧಗನೆ ಬೆಂಕಿ ಉರಿಯುತ್ತಿದೆ. ಅವಳು ಮರದ ತುಂಡುಗಳನ್ನು ಹಾಕುತ್ತಿದ್ದಾಳೆ. ಅಗ್ನಿಕುಂಡದ ಸುತ್ತಲೂ ನಾಲ್ಕು ವಿಕಾರ ರೂಪದ ಮುಖಗಳನ್ನು ಕುಂಕುಮದಲ್ಲಿ ಬಿಡಿಸಿದ್ದಾಳೆ. ನಾಲ್ಕು ದಿಕ್ಕಿನಲ್ಲಿ ನಾಲ್ಕು ಮುಖಗಳು. ಒಂದೊಂದು ಕೋಳಿಮೊಟ್ಟೆ, ಸೇಂದಿ... ರಕ್ತ ತುಂಬಿರುವ ಸಣ್ಣ ಮಡಕೆಗಳು... ಮತ್ತೊಂದು ಕಡೆ ಸಿಂಹದ ಮೂತ್ರ!

ಹಾಲಿನ ಕೆನೆಯ ಬಣ್ಣದ ಯೌವನಪೂರಿತ ದೇಹ ಈಗ ಬೆಂಕಿಯ ಶಾಖದಿಂದಾಗಿ ಕೆಂಪು ಛಾಯೆಯನ್ನು ತಳೆದಿದೆ. ತಲೆಯ ಕೂದಲು ಕೆದರಿದೆ, ಅಗಲವಾದ ಬೆನ್ನಿನ ತುಂಬಾ ಕರಿಮೋಡಗಳ ಹಿಂಡಿನಂತೆ ತಲೆಗೂದಲು ಹರಡಿಕೊಂಡಿದೆ. ಅವಳು ಒಂಟಿಕಾಲಿನಲ್ಲಿ ನಿಂತಿದ್ದಾಳೆ. ಮಂತ್ರ ಹೇಳುತ್ತಿದ್ದಾಳೆ. ಎಂಥ ಉಚ್ಚಾರ! ಕಂಚಿನ ಕಂಠ ಅವಳದ್ದು. ತ್ರಿಮಯ ಸ್ವರದ ಉಚ್ಚಾರ.

ಆ ದುಂಡನೆಯ ಮುಖದಲ್ಲಿ ರಕ್ತದ ತಿಲಕ. ಮುಖದ ತುಂಬಾ ಬೆವರಿನ ಹನಿಗಳು ಮೂಡಿವೆ. ಅಗ್ನಿಕುಂಡದ ಹತ್ತಿರ ಗೊಂಬೆ ಇದೆ. ತಲೆಯ ಕೂದಲನ್ನು ಲೇಪಿಸಲಾಗಿದೆ. ಎರಡು ಕೈಗಳನ್ನು ಮೇಲೆತ್ತಿ ಆಗಸದ ಕಡೆ ಮುಖ ಮಾಡುತ್ತಾ ಆಹ್ವಾನಿಸುತ್ತಿದ್ದಾಳೆ. ಆವಾಹನೆ ಮಂತ್ರದ ಕೊನೆಯ ಚರಣ ಮುಗಿದ ಕೂಡಲೇ ಆಗಸದಲ್ಲಿ ಕಂಡಿತು. ಕೆಂಪು ಜ್ವಾಲೆ ಪೊರಕೆಯಾಕಾರದಲ್ಲಿದೆ. ಪ್ರಚಂಡ ವೇಗದಿಂದ ನುಗ್ಗುತ್ತಿದೆ. ಗಿರಗಿರನೆ ತಿರುಗುತ್ತಿದೆ. ಅವಳು ಕೋಳಿಯ ಕತ್ತನ್ನು ಕತ್ತರಿಸಿ ಅದನ್ನು ಗೊಂಬೆಯ ಮೇಲೆ ಹಿಡಿದಳು. ರಕ್ತ ಹನಿಹನಿಯಾಗಿ ಬೀಳುತ್ತಿದೆ. ಜ್ವಾಲೆ ಅದರೊಳಗೆ ಸೇರಿಕೊಂಡಿತು. ಗೊಂಬೆ ಅದಾಗಿಯೇ ಅಲುಗುತ್ತಿದೆ. ಅವಳು ಈಗ ಉಪಸಂಹಾರದ ಕೆಲಸವನ್ನು ಮುಗಿಸಿ ಮಂಡಲದಿಂದ ಬಂದಳು.

ಅಲ್ಲಿ ಒಬ್ಬ ಎದುರಾದ. ಅವನ ಪ್ರಾಯ ನಲವತ್ತರೊಳಗೆ. ಕಟ್ಟುಮಸ್ತಾದ ದೇಹ. ಅವನೊಬ್ಬ ಬ್ರಹ್ಮಚಾರಿ. ಅವನ ಮುಖದಲ್ಲಿ ಏನೋ ಒಂದು ರೀತಿಯ ತೇಜಸ್ಸು ಕಂಡುಬರುತ್ತಿದೆ. ಅವನನ್ನು ಕಂಡ ಕೂಡಲೇ ಅವಳ ಮಾಂತ್ರಿಕ ಪದ್ಧತಿಯಲ್ಲಿ ನಮಸ್ಕರಿಸಿದಳು.

'ಯಾರ ಮೇಲೆ ಪ್ರಯೋಗ ಮಾಡಿದೆ?'

'ಸಾರಾಯಿ ನರಸಯ್ಯನ ಮೇಲೆ'

'ಅವನೇನು ಮಾಡಿದ?'

'ನನ್ನನ್ನು ಹಾಳು ಮಾಡಲು ಪ್ರಯತ್ನಿಸಿದ'

'ಏನು ಮಾಡಿರುವೆ?'

'ಗಾಳಿ ದೂತನನ್ನು ಕಳಿಸಿದ್ದೇನೆ'

ಅವನು ಅವಳಿಗೆ ಬೆನ್ನು ತಿರುಗಿಸಿ ನಡೆಯುತ್ತಾ 'ನಿನ್ನ ಸೋದರಮಾವನ ಗುಣ ನಿನ್ನಲ್ಲಿ ತುಂಬಿದೆ' ಎಂದಾಗ ಅವಳು ಮಾತಾಡಲಿಲ್ಲ.

ಬಿರಬಿರನೆ ನಡೆದ. ಗಾಳಿ ಬೀಸುತ್ತಿರುವ ರಭಸಕ್ಕೆ ಭುಜದ ಮೇಲೆ ಇದ್ದ ಟವೆಲ್ ನೆಲ ಕಂಡಿತು. ಅದನ್ನು ತೆಗೆದುಕೊಳ್ಳಲಿಲ್ಲ. ಅವಳು ಅತ್ತ ಕಡೆ ಬಂದು ಅದನ್ನು ಎತ್ತಿಕೊಂಡಳು. ಅವನು ಮದಂತ. ಇವಳ ಮಾಂತ್ರಿಕ ಗುರು ಮದಂತ. ಸಾಕಿದವನು... ವಿದ್ಯೆ ಕಲಿಸಿದವನು.

* * *

ಗಾಳಿ ದೂತ ಎಂಬ ಒಂದು ಭೂತ. ಅದು ಮನುಷ್ಯನಲ್ಲಿ ಸೇರಿಕೊಂಡು ಮೂಳೆಗಳನ್ನು ಅಲ್ಲಾಡಿಸುತ್ತಿದೆ... ರಕ್ತ ಹೀರುತ್ತದೆ. ಆ ಯಾತನೆ ಸಾಮಾನ್ಯವಲ್ಲ. ಬಾಯಿ ಬಡಿದುಕೊಳ್ಳುತ್ತಿದ್ದಾನೆ. ಎಗರೆಗರಿ ಬೀಳುತ್ತಿದ್ದಾನೆ. ನೆಲದ ತುಂಬಾ ಉರುಳಾಡುತ್ತಿದ್ದಾನೆ. ಮೈಯಿಂದ ರಕ್ತ ಬರುತ್ತಿಲ್ಲ. ಗರಗಸದಿಂದ ಕುಯ್ದಂಥ ಯಾತನೆ ಉಂಟಾಗಿ ಅರಚುತ್ತಿದ್ದಾನೆ ಎದೆ ಬಿರಿಯುವಂತೆ.

ನರಸಯ್ಯನ ಬಂಧುಗಳು... ಸ್ನೇಹಿತರು ಭಯ ಮತ್ತು ಗಾಬರಿಯಿಂದ ನೋಡುತ್ತಿದ್ದಾರೆ. ಇಡೀ ಊರಿಗೇ ಸುದ್ದಿ ಹರಡಿತು. ರುದ್ರನಾಗನ ಮನೆಯ ಹೆಣ್ಣನ್ನು ಮಾವಿನ ತೋಪಿಗೆ ಕರೆದುಕೊಂಡು ಹೋಗಿದ್ದ ನರಸಯ್ಯ. ಅದಕ್ಕೆ ಈ ರೀತಿಯಾಗಿದೆ. 'ಅವಳು ಹೆಣ್ಣಲ್ಲ, ಪಿಶಾಚಿ! ನರಸಯ್ಯನ ಕೈಕಾಲುಗಳು ಮುರಿದವು. ಅವನು ಶಾಶ್ವತ ಅಂಗವಿಕಲ ಆಗಿದ್ದಾನೆ.

* * *

ನಗುತ್ತಿದ್ದಾನೆ ರುದ್ರನಾಗ.

ಹಲ್ಲುಗಳಿಲ್ಲದ ಬೊಚ್ಚುಬಾಯಿ ತೆರೆದು ಇಡೀ ದೇಹವನ್ನು ಕುಲುಕಿಸುತ್ತಾ ನಗುತ್ತಿದ್ದಾನೆ. ತುಸು ದೂರದಲ್ಲಿ ನಿಂತುಕೊಂಡು ಅವಳು ತಾನು ಮಾಡಿದ್ದನ್ನು ವಿವರಿಸುತ್ತಿದ್ದಾಳೆ.

ರುದ್ರನಾಗ 'ಮಲ್ಲಿಗೆ... ನೀನು... ನೀನು ತುಂಬಾ ತುಂಬಾ ಸಾಧನೆ ಮಾಡಬೇಕು. ಎಲ್ಲಾ ಶಕ್ತಿಗಳನ್ನು ವಶಪಡಿಸಿಕೊಳ್ಳಬೇಕು.'

'ಇದನ್ನೆಲ್ಲಾ ನಾನ್ಯಾಕೆ ಕಲಿಯಬೇಕು. ಬೇರೆ ಯಾವ ಹೆಣ್ಣುಗಳೂ ನನ್ನಂತೆ ಕಲಿತಿಲ್ಲ'

ರುದ್ರನಾಗ ಗಡುಸಾಗಿ 'ಬೇರೆ ಹೆಣ್ಣುಗಳಂತೆ ನೀನಲ್ಲ, ನೀನು ಚೆನ್ನಾಗಿ ಕಲಿಯಬೇಕು. ನಾನು ಯಾರನ್ನು ತೋರಿಸುತ್ತೇನೋ ಅವರ ಮೇಲೆ ಪ್ರಯೋಗ ಮಾಡಬೇಕು. ತಿಳಿಯಿತೆ' ಎಂದಾಗ ಅವಳು ತಲೆಯಾಡಿಸಿದಳು. ರುದ್ರನಾಗ ಮಲ್ಲಿಗೆಯ ಮುಖ ನೋಡಿದ. ಅವಳು ಹೋಲಿಕೆಯಲ್ಲಿ ಬಹುಪಾಲು ತಾಯಿಯಂತೆ ಇದ್ದಾಳೆ. ರುದ್ರನಾಗ ನಗುತ್ತಿದ್ದಾನೆ. ಸೇಡು ತೀರಿಸಿಕೊಳ್ಳಲು ಬ್ರಹ್ಮಾಸ್ತ್ರ ಸಿದ್ಧವಾಗಿದೆ. ಆ ಬ್ರಹ್ಮಾಸ್ತ್ರವೇ ಮಲ್ಲಿಗೆ!

ಡಿಸೆಂಬರ್ ತಿಂಗಳ ಚಳಿ. ಅಬ್ಬ... ರಕ್ತ ಹೆಪ್ಪುಗಟ್ಟಿಸುತ್ತಿದೆ. ಬೆಳಗಿನ ಐದು ಗಂಟೆ. ಹಿಮ ಸುರಿಯುತ್ತಿದೆ. ಕತ್ತಲಿನ್ನೂ ಕರಗಿಲ್ಲ. ಗಂಡು ಹೆಣ್ಣಿನ ಧ್ವನಿ... ಮಂತ್ರ ತೇಲಿ ಬರುತ್ತಿದೆ. ಅವರಿಬ್ಬರು ಎದುರ ಬದುರಾಗಿದ್ದರೆ, ಅವನು ಪದ್ಮಾಸನ ಹಾಕಿಕೊಂಡು ಕುಳಿತಿದ್ದಾನೆ.

ಗುರು ಮಾಂತ್ರಿಕ ಮದಂತ!

ಅವಳು ಅವನಿಗೆ ಎದುರಾಗಿ ನಿಂತಿದ್ದಾಳೆ ಒಂಟಿಕಾಲಿನಲ್ಲಿ. ದಕ್ಷಿಣದ ದಿಕ್ಕಿಗೆ ತಿರುಗಿದ್ದಾಳೆ. ಕತ್ತಿನಲ್ಲಿ ರುಂಡಗಳ ಹಾರ ಇದೆ. ಅವನು ಮಂತ್ರ ಹೇಳುತ್ತಿದ್ದಾನೆ. ಅವಳು ಅದನ್ನು ಏಕಾಗ್ರತೆಯಿಂದ ಆಲಿಸಿ ಅವನು ಹೇಳಿದಂತೆ ಸ್ವರ, ವರ್ಣದ ವ್ಯತ್ಯಾಸ ಮಾಡದೆ ಹೇಳುತ್ತಿದ್ದಾಳೆ. ಹಿಮ ಸುರಿಯುತ್ತಿದೆ. ಚಳಿಯಿಂದ ನಡುಗುತ್ತಿದ್ದಾಳೆ. ಧ್ವನಿಯಲ್ಲಿಯೂ ಕಂಪನ. ಮದಂತ ಅವಳಿಗೆ ಪಾತಾಳ ಭೈರವಿ ಪ್ರಯೋಗ ಕಲಿಸುತ್ತಿದ್ದಾನೆ. ಇದನ್ನು ಸಾಧನೆ ಮಾಡುವುದು ಸುಲಭ ಅಲ್ಲ. ಮಂತ್ರಗಳು ಕಠಿಣ. ಕೈಕರಣ ಸಹ ತುಂಬಾ ಇರುತ್ತದೆ. ಎಲ್ಲೇ ಲೋಪವಾದರೂ ತೊಂದರೆಯಾಗುವುದು ಸಾಧಕನಿಗೆ ಮಾತ್ರ.

ಒಂದು ಕಡೆ ಉಚ್ಚಾರ ತಪ್ಪಿತು. ಎರಡು ಸಲ ತಿದ್ದಿದರೂ, ಪ್ರಯತ್ನಿಸಿದರೂ ಸಹ ಅವಳು ತಪ್ಪು ಹೇಳಿದಳು. ರೊಂಯ್ ಎಂಬ ಶಬ್ದ. ತುಸು ದೂರದಿಂದ ಅಂಗೈ ಅಗಲದ ಕಲ್ಲೊಂದು ತೂರಿಕೊಂಡು ಬಂದು ಬೆನ್ನಿಗೆ ಬಡಿಯಿತು. ನೋವಿನಿಂದ ಕಿರುಚಿದಳು. ನಿಂತಲ್ಲೇ ತೂರಾಡಿದಳು. ಮರದ ಹಿಂದೆ ನಿಂತಿದ್ದ ರುದ್ರನಾಗ ಅಬ್ಬರಿಸುತ್ತಾ ಹತ್ತಿರ ಬಂದು 'ಎಲ್ಲಿದೆ ನಿನ್ನ ಮನಸ್ಸು, ಸರಿಯಾಗಿ ಕಲಿಯದಿದ್ದರೆ ಉಗುರುಗಳನ್ನು ಸೀಳಿ ಉಪ್ಪು ಕಾರ ತುಂಬುತ್ತೇನೆ' ಎಂದ.

ಅವಳು ಭಯದಿಂದ ನಡುಗಿದಳು. ಕಂಬನಿಯನ್ನು ಸರ್ರನೆ ಒರೆಸಿಕೊಂಡು 'ಇಲ್ಲ... ಇಲ್ಲ... ಸರಿಯಾಗಿ ಕಲಿಯುತ್ತೇನೆ' ಎಂದಳು.

ಮಾವ... ಕಂಸ ಮಾವ! ಕ್ರೂರಿ... ಬಲು ಕ್ರೂರಿ. ತಪ್ಪು ಮಾಡಿದರೆ ಕಠಿಣ ರೀತಿಯಲ್ಲಿ ದಂಡಿಸುತ್ತಾನೆ ಎಂದು ಅನುಭವದಿಂದ ಗೊತ್ತಿತ್ತು. ಚಂಚಲಗೊಂಡಿದ್ದ ಮನಸ್ಸನ್ನು ಸರಿಪಡಿಸಿಕೊಂಡು ಪ್ರಾರಂಭಿಸಿದಳು.

ಮದಂತ ಅವಳ ಕಡೆ ಅನುಕಂಪದಿಂದ ನೋಡಿದ. ಎಂಥ ಅನ್ಯಾಯ? ಇವಳಿಗ್ಯಾಕೆ ಇಂಥ ಶಿಕ್ಷೆ? ಮಲ್ಲಿಗೆ ವಿಶ್ವದ ಗಮನ ಸೆಳೆಯುವಂಥ ಅಪರೂಪದ ಸುಂದರಿ ನಿಜ. ಆದರೆ ನತದೃಷ್ಟೆ. ಭೂಮಿಗೆ ಬಿದ್ದ ಕೂಡಲೇ ತೋಳದಿಂದಾಗಿ ಹೆತ್ತವರಿಂದ ದೂರಾದ ಹೆಣ್ಣು. ತಾಯಿಯ ಅಣ್ಣ ರುದ್ರನಾಗ ಇವಳ ಪಾಲಿಗೆ ದ್ವಾಪರಯುಗದ ಕಂಸ ಆಗಿರುವುದು ವಿಪರ್ಯಾಸ. ಅವಳು ಅನಕ್ಷರಸ್ಥೆ. ರುದ್ರನಾಗ ಅವಳನ್ನು ಶಾಲೆಗೆ ಕಳಿಸಲಿಲ್ಲ. ಬುದ್ಧಿ ತಿಳಿದಾಗಿನಿಂದ ಈ ಮಾಂತ್ರಿಕ ವಿದ್ಯೆ. ಕನಸು ಕಾಣಬೇಕಾದ ವಯಸ್ಸು, ನಗು, ಸಂತೋಷದಿಂದ ತನ್ನ ವಯಸ್ಸಿನ